# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611/2013**

ಸಿ.ಡಬ್ಲ್ಯು. 6
ಪಿ.ಡಬ್ಲ್ಯು. 6

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂತೋಷ ನಾಯ್ಕ |
| ತಂದೆಯ/ಗಂಡನ ಹೆಸರು | : | ಮಹಾದೇವ ನಾಯ್ಕ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ್ತವ್ಯ | : | ಚಿತ್ರಗಿ, ಕುಮಟಾ |

**(ಇಂದು ದಿನಾಂಕಃ 07-01-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

## ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಆ.ಸಾ. 7 ರವರ ಪರಿಚಯ ಇದೆ. ಸುಮಾರು 5 ವರ್ಷಗಳ ಹಿಂದೆ ಪೊಲೀಸರು ನನ್ನ ಮತ್ತು ಆ.ಸಾ. 7 ರವರ ಸಮಕ್ಷಮ ಕುಮಟಾ ಪಟ್ಟಣದ ಸಿಂಡಿಕೇಟ್ ಬ್ಯಾಂಕ್ ಮತ್ತು ನೆಲ್ಲಿಕೇರಿಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ 2 ಪಂಚನಾಮೆಯನ್ನು ತಯಾರಿಸಿರುತ್ತಾರೆ. ಪೊಲೀಸರು ಸದ್ರಿ ಬ್ಯಾಂಕ್‌ಗಳಲ್ಲಿ ತಲಾ ರೂ. 25,000/- ಮೌಲ್ಯದ ಒಂದೊಂದು ಚೆಕ್‌ಗಳನ್ನು ಜಪ್ತುಪಡಿಸಿರುತ್ತಾರೆ. ಸದ್ರಿ ಪಂಚನಾಮೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ. ಸದ್ರಿ ಪಂಚನಾಮೆಗಳಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಆದ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 6 ಎಂತಲೂ, ಸಾಕ್ಷಿ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿದಾರರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ ಆದ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು

ಅದನ್ನು ನಿ.ಪಿ. 7 ಎಂತಲೂ, ಸಾಕ್ಷಿ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸದ್ರಿ ಸಮಯ ಜಪ್ತುಪಡಿಸಲಾದ ನಿ.ಪಿ. 4 ಮತ್ತು 5 ಚಕ್‌ಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ;-**

1. ನನ್ನ ಮನೆ ಕುಮಟಾ ಸಿಂಡಿಕೇಟ್ ಬ್ಯಾಂಕ್‌ನಿಂದ ಒಂದುವರೆ ಕಿಲೋ ಮೀಟರ ದೂರದಲ್ಲಿದೆ. ನೆಲ್ಲಿಕೇರಿಯ ಕೆ.ವಿ.ಜಿ. ಬ್ಯಾಂಕ್‌ನಿಂದ 2 ಕಿ.ಮೀ. ದೂರದಲ್ಲಿದೆ. ನಾನು ಈ ಮೊದಲು ಬೇರೆ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿಲ್ಲ. ಪಂಚನಾಮೆ ಜರುಗಿಸಿದ ದಿನಾಂಕವನ್ನು ಹೇಳಲು ಬರುವದಿಲ್ಲ. ನಿ.ಪಿ. 6 ಮತ್ತು 7 ನ್ನು ಯಾರು ಬರೆದರು ಮತ್ತು ಯಾರು ಮಾಹಿತಿ ನೀಡಿದರು ಎಂದು ನಿಖರವಾಗಿ ಹೇಳಲು ಬರುವದಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಸಂಪೂರ್ಣ ಮಾಹಿತಿ ಇಲ್ಲ, ಕೆಲವೊಂದು ಮಾಹಿತಿ ಇದೆ. ನಿ.ಪಿ.4 ಮತ್ತು 5 ಚಕ್‌ಗಳನ್ನು ಜಪ್ತುಪಡಿಸಿದ ಪೊಲೀಸ್ ಅಧಿಕಾರಿಯ ಹೆಸರು ಗೊತ್ತಿಲ್ಲ. ಸದ್ರಿ ಚಕ್‌ಗಳು ಯಾರಿಗೆ ಸೇರಿತ್ತು ಮತ್ತು ಯಾವ ಬ್ಯಾಂಕಿನದ್ದು ಎಂದು ನೋಡದೇ ನಿಖರವಾಗಿ ಹೇಳಲು ಬರುವದಿಲ್ಲ. ನಾನು ಬಿಜೆಪಿ ಪಕ್ಷದ ಸದಸ್ಯ ಮತ್ತು ಪುರಸಭೆಯಲ್ಲಿ ಅಧ್ಯಕ್ಷನಾಗಿದ್ದೆನು ಎಂದರೆ ಸರಿ. ನನಗೆ ಕುಮಟಾ ಪೊಲೀಸ್ ಅಧಿಕಾರಿಗಳ ವಿಶೇಷ ಪರಿಚಯ ಇದೆ ಎಂದರೆ ಸರಿ. ನಾನು ಹೇಳುವಂತೆ ನಿ.ಪಿ. 6 ಮತ್ತು 7 ರ ಪ್ರಕಾರ ಯಾವುದೇ ಪಂಚನಾಮೆ ಆಗಿಲ್ಲ ಹಾಗೂ ಅದರಡಿಯಲ್ಲಿ ಯಾವುದೇ ಚಕಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಪ್ರೇರಿತ ಕೇಸಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.